NP – 911

VI Semester B.Com. Examination, June/July 2026
(NEP)
COMMERCE
COM 6.2 : Income Tax Law and Practice – II

Time : 2½ Hours Max. Marks : 60

Instruction : *Answers should be written **completely** either in **English** or in **Kannada**.*

SECTION – A
ವಿಭಾಗ - ಎ

Answer **any 6** sub-questions. **Each** sub-question carries **2** marks. **(6×2=12)**

ಯಾವುದಾದರೂ **ಆರು** ಉಪ-ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉಪ-ಪ್ರಶ್ನೆಗೆ **ಎರಡು** ಅಂಕಗಳು.

1. a) What is profession ?

ವೃತ್ತಿ ಎಂದರೇನು ?

b) Write any four inadmissible expenses while computing business income.

ವ್ಯವಹಾರದ ಆದಾಯವನ್ನು ಲೆಕ್ಕಮಾಡುವಾಗ ಯಾವುದಾದರೂ ನಾಲ್ಕು ಸ್ವೀಕಾರಾರ್ಹವಲ್ಲದ ಖರ್ಚುಗಳನ್ನು ಬರೆಯಿರಿ.

c) Define capital asset.

ಬಂಡವಾಳ ಆಸ್ತಿಯನ್ನು ವ್ಯಾಖ್ಯಾನಿಸಿ.

d) Name any four incomes chargeable to tax under the head income from other sources.

ಇತರೆ ಮೂಲಗಳಿಂದ ಬರುವ ಆದಾಯದ ಅಡಿಯಲ್ಲಿ ತೆರಿಗೆಗೆ ಒಳಪಡುವ ಯಾವುದಾದರೂ ನಾಲ್ಕು ಆದಾಯಗಳನ್ನು ಹೆಸರಿಸಿ.

e) What are tax free government securities ?

ತೆರಿಗೆ ಮುಕ್ತ ಸರ್ಕಾರಿ ಭದ್ರತಾ ಪತ್ರಗಳೆಂದರೇನು ?

P.T.O.

f) State any two functions of CBDT.
CBDTಯ ಯಾವುದಾದರೂ ಎರಡು ಕಾರ್ಯಗಳನ್ನು ತಿಳಿಸಿ.

g) What do you mean by self-assessment ?
ಸ್ವಯಂ ಮೌಲ್ಯಮಾಪನ ಎಂದರೇನು ?

h) Mention any two deemed incomes.
ಯಾವುದಾದರೂ ಎರಡು ಡೀಮ್ಡ್ ಆದಾಯಗಳನ್ನು ಹೆಸರಿಸಿ.

SECTION – B

ವಿಭಾಗ - ಬಿ

Answer **any 3** questions. **Each** question carries **4** marks. **(3×4=12)**

ಯಾವುದಾದರೂ **3** ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಪ್ರಶ್ನೆಗೆ **4** ಅಂಕಗಳು.

2. Write in brief the types of assessment.
ಮೌಲ್ಯಮಾಪನದ ವಿಧಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

3. Mr. Bhuvan purchased a plot in 2001 – 02 for ₹ 2,00,000. It was sold on 15-5-2024 for ₹ 26,80,000 and he paid ₹ 2,00,000 as brokerage. He invested ₹ 2,00,000 in NHAI bonds and ₹ 3,10,000 in bonds issued by Rural Electrification Corporation Ltd. CII : 2001 – 02 : 100, 2024 – 25 : 363.
Compute his taxable capital gain for the A. Y. 2025 – 26.

ಶ್ರೀ ಭುವನ್‌ರವರು 2001 – 02ರಲ್ಲಿ ₹ 2,00,000 ಗಳಿಗೆ ಒಂದು ನಿವೇಶನವನ್ನು ಖರೀದಿಸಿದರು. ಅದನ್ನು 15-5-2024 ರಂದು ₹ 26,80,000 ಗಳಿಗೆ ಮಾರಾಟ ಮಾಡಲಾಯಿತು. ಅವರು ದಲ್ಲಾಳಿ ಶುಲ್ಕವಾಗಿ ₹ 2,00,000 ಪಾವತಿಸಿದರು. ಅವರು NHAI ಬಾಂಡುಗಳಲ್ಲಿ ₹ 2,00,000 ಹಾಗೂ ಗ್ರಾಮೀಣ ವಿದ್ಯುದೀಕರಣ ನಿಗಮ ನಿಯಮಿತ ಬಾಂಡುಗಳಲ್ಲಿ ₹ 3,10,000 ವನ್ನು ಹೂಡಿಕೆ ಮಾಡಿದ್ದಾರೆ.
CII : 2001 – 02 : 100, 2024 – 25 : 363

ಕರ ವರ್ಷ 2025 – 26ಕ್ಕೆ ತೆರಿಗೆಗೆ ಒಳಪಡುವ ಬಂಡವಾಳ ಗಳಿಕೆಯನ್ನು ಕಂಡುಹಿಡಿಯಿರಿ.

4. Mr. Srinath (Resident) is providing you the following particulars of his income and expenditure for the P. Y. 2024 – 25. Compute his total income. (Ignore alternative tax regime under Section 115 BAC).
   1) Income from salary (computed) ₹ 6,00,000
   2) Income from other sources ₹ 2,00,000
   3) Own contribution to NPS ₹ 40,000
   4) Own contribution to PPF ₹ 2,00,000
   5) Deposit in notified annuity plan of LIC ₹ 5,000.

   ಶ್ರೀನಾಥ್ (ನಿವಾಸಿ) ಅವರು ಕರ ವರ್ಷ 2024 – 25ರ ಆದಾಯ ಮತ್ತು ವೆಚ್ಚವನ್ನು ಸಲ್ಲಿಸಿರುತ್ತಾರೆ. ಅವರ ಒಟ್ಟು ಆದಾಯವನ್ನು ಕಂಡುಹಿಡಿಯಿರಿ. (ಸೆಕ್ಷನ್ 115 BAC ಅಡಿಯಲ್ಲಿ ಪರ್ಯಾಯ ತೆರಿಗೆ ಪದ್ಧತಿಯನ್ನು ನಿರ್ಲಕ್ಷಿಸಿ)
   1) ಸಂಬಳದ ಆದಾಯ (ಲೆಕ್ಕಹಾಕಲಾಗಿದೆ) ₹ 6,00,000
   2) ಇತರ ಮೂಲಗಳಿಂದ ಬರುವ ಆದಾಯ ₹ 2,00,000
   3) NPSಗೆ ಸ್ವಂತ ಕೊಡುಗೆ ₹ 40,000
   4) PPFಗೆ ಸ್ವಂತ ಕೊಡುಗೆ ₹ 2,00,000
   5) LICಯ ಅಧಿಸೂಚಿತ ವರ್ಷಾಶನ ಯೋಜನೆಯಡಿಯಲ್ಲಿ ಠೇವಣಿ ಇರಿಸಿದ್ದು ₹ 5,000.

5. Mr. Suman a Lawyer in Bengaluru provides data of his incomes and expenses for the P. Y. 2024 – 25. Compute his income from profession for the A. Y. 2025 – 26.

Incomes	₹	**Expenditures**	₹
Legal counselling fees	1,40,000	Office rent	15,000
Arbitration fees	50,000	Car expenses	7,000
Loan from bank	25,000	Printing and stationery	6,000
Interest on bank FD	8,000	NSC purchased	50,000

40% of car expenses is related to personal use.

ಶ್ರೀ ಸುಮನ್‌ರವರು ಬೆಂಗಳೂರಿನಲ್ಲಿ ಒಬ್ಬ ವಕೀಲರಾಗಿದ್ದು, ಕರ ವರ್ಷ 2024 – 25ಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಮಾಹಿತಿಯನ್ನು ನೀಡಿರುತ್ತಾರೆ. ಅವರ ವೃತ್ತಿ ಆದಾಯವನ್ನು ಕರ ವರ್ಷ 2025 – 26ಕ್ಕೆ ಕಂಡುಹಿಡಿಯಿರಿ.

ಆದಾಯಗಳು	₹	**ಖರ್ಚುಗಳು**	₹
ಕಾನೂನು ಸಲಹೆ ಶುಲ್ಕ	1,40,000	ಕಛೇರಿ ಬಾಡಿಗೆ	15,000
ಮಧ್ಯಸ್ಥಿಕೆ ಶುಲ್ಕ	50,000	ಕಾರಿನ ಖರ್ಚು	7,000
ಬ್ಯಾಂಕಿನಿಂದ ಪಡೆದ ಸಾಲ	25,000	ಮುದ್ರಣ ಮತ್ತು ಲೇಖನ ಸಾಮಗ್ರಿ	6,000
ಬ್ಯಾಂಕಿನ ಸ್ಥಿರ ಠೇವಣಿ ಮೇಲಿನ ಬಡ್ಡಿ	8,000	NSC ಖರೀದಿ	50,000

ಶೇ. 40 ರಷ್ಟು ಕಾರಿನ ಖರ್ಚು ಸ್ವಂತ ಬಳಕೆಗೆ.

6. Mr. Akash has the following incomes during the year ending 31-3-2025.

		₹
a)	Royalty from books	40,000
b)	Interest on post office SB A/c	2,000
c)	Interest on securities	20,000
d)	Director's fees	50,000
e)	Dividend from Indian company	7,000
f)	Gift from father	5,000
g)	Winning from Horse race (Net)	49,000

Compute his income from other sources for the A. Y. 2025 – 26.

ಶ್ರೀ ಆಕಾಶ್‌ರವರ ಆದಾಯ ವಿವರಗಳು ವರ್ಷಾಂತ್ಯ 31-3-2025 ಕ್ಕೆ ಈ ಕೆಳಗಿನಂತಿವೆ.

		₹
a)	ಪುಸ್ತಕಗಳಿಂದ ಬಂದ ರಾಜಧನ	40,000
b)	ಅಂಚೆ ಕಛೇರಿ ಉಳಿತಾಯ ಖಾತೆ ಬಡ್ಡಿ	2,000
c)	ಭದ್ರತೆಗಳ ಮೇಲಿನ ಬಡ್ಡಿ	20,000
d)	ನಿರ್ದೇಶಕರ ಶುಲ್ಕ	50,000
e)	ದೇಶೀಯ ಕಂಪನಿಯಿಂದ ಪಡೆದ ಲಾಭಾಂಶ	7,000
f)	ತಂದೆಯಿಂದ ಬಂದ ಉಡುಗೊರೆ	5,000
g)	ಕುದುರೆ ಜೂಜಿನಿಂದ ಬಂದ ಗಳಿಕೆ (ನಿವ್ವಳ)	49,000

ಕರ ವರ್ಷ 2025 – 26ಗೆ ಇತರೆ ಮೂಲಗಳಿಂದ ಬಂದ ಆದಾಯವನ್ನು ಕಂಡುಹಿಡಿಯಿರಿ.

SECTION – C

ವಿಭಾಗ - ಸಿ

Answer **any 3** questions from the following. **Each** question carries **12** marks. **(3×12=36)**

ಕೆಳಗಿನ ಯಾವುದಾದರೂ **3** ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಪ್ರಶ್ನೆಗೆ **12** ಅಂಕಗಳು.

7. Following is the P & L A/c of Mr. Chethan (Resident) for the year ending 31-3-2025. Compute his business income.

Particulars	**₹**	**Particulars**	**₹**
To Salary	40,000	By Gross profit	1,88,000
" Advertisement	5,000	" Rent from H.P.	16,500
" Interest on capital	20,000	" Dividend	4,000
" Fire insurance premium		" Bad debts recovered	15,000
(₹ 3,000 relates to H.P.)	6,000	" Sundry incomes	3,000
" Income tax	9,000		
" Donation to student	2,500		
" Bad debts	1,000		
" Provision for bad debts	3,000		
" Life insurance premium	6,000		
" Depreciation	6,600		
" Purchase of car	70,000		
" Repair expenses	5,000		
" Net profit	52,400		
	2,26,500		**2,26,500**

Additional information :

a) Allowable depreciation as per IT Rule ₹ 8,000.

b) Salary includes ₹ 3,000 paid to domestic servant.

c) 50% of repairs in respect of house property.

d) Out of bad debts recovered ₹ 6,000 were disallowed in earlier previous year.

ಕೆಳಗಿನ ಲಾಭ ಮತ್ತು ನಷ್ಟ ಖಾತೆಯು ಶ್ರೀ ಚೇತನ್‌ರವರ (ನಿವಾಸಿ) ಆರ್ಥಿಕ ವರ್ಷ 31-3-2025ಕ್ಕೆ ಸೇರಿದ್ದು, ಕರ ವರ್ಷ 2025 – 26ಕ್ಕೆ ವ್ಯವಹಾರದ ಆದಾಯವನ್ನು ಕಂಡುಹಿಡಿಯಿರಿ.

ವಿವರಗಳು	₹	ವಿವರಗಳು	₹
ಗೆ ಸಂಬಳ	40,000	ಯಿಂದ ಸ್ಥೂಲ ಲಾಭ	1,88,000
" ಜಾಹೀರಾತು	5,000	" ಮನೆಯಿಂದ ಬಂದ ಬಾಡಿಗೆ	16,500
" ಬಂಡವಾಳದ ಮೇಲಿನ ಬಡ್ಡಿ	20,000	" ಲಾಭಾಂಶ	4,000
" ಬೆಂಕಿ ವಿಮಾ ಕಂತು		" ವಸೂಲಾದ ಕರಡು ಸಾಲ	15,000
(₹ 3,000 ಸ್ವಂತ ಮನೆಗೆ)	6,000	" ಇತರೆ ಆದಾಯಗಳು	3,000
" ಆದಾಯ ತೆರಿಗೆ	9,000		
" ವಿದ್ಯಾರ್ಥಿಗೆ ದೇಣಿಗೆ	2,500		
" ಕರಡು ಸಾಲ	1,000		
" ಕರಡು ಸಾಲಗಳ ನಿಧಿ	3,000		
" ಜೀವ ವಿಮಾ ಕಂತು	6,000		
" ಸವಕಳಿ	6,600		
" ಕಾರಿನ ಖರೀದಿ	70,000		
" ರಿಪೇರಿ ಖರ್ಚುಗಳು	5,000		
" ನಿವ್ವಳ ಲಾಭ	52,400		
	2,26,500		**2,26,500**

ಪೂರಕ ಮಾಹಿತಿ :

a) ಆದಾಯ ತೆರಿಗೆ ನಿಯಮದ ಪ್ರಕಾರ ಕಳೆಯಬಹುದಾದ ಸವಕಳಿ ₹ 8,000.

b) ಸಂಬಳದಲ್ಲಿ ಮನೆ ಕೆಲಸದವನ ಸಂಬಳ ₹ 3,000 ಸೇರಿಕೊಂಡಿದೆ.

c) ಶೇಕಡಾ 50 ರಷ್ಟು ರಿಪೇರಿ ಖರ್ಚು ಮನೆಗೆ ಸಂಬಂಧಿಸಿದೆ.

d) ವಸೂಲಾದ ಕರಡು ಸಾಲಗಳಲ್ಲಿ ₹ 6,000 ಗಳನ್ನು ಹಿಂದಿನ ವರ್ಷದಲ್ಲಿ ಒಪ್ಪಲಾಗಿಲ್ಲ.

8. Mr. Hari a physician and resident of Udupi, submits the following Receipts and Payment Account for the year ending 31-3-2025.

Receipts	₹	Payments	₹
To Balance b/d	65,000	By Rent of clinic	35,000
" Consultation fee	1,50,000	" Electricity	3,300
" Visiting fees	70,000	" Income tax	13,000
" Loan from bank (for professional)	1,30,000	" Salary to compounder	50,000
		" Purchase of books	24,000
" Loan from bank (for personal)	50,000	" Expenses on IT proceedings	5,000
" Gifts from patients	22,000	" Gift to wife	3,000
" Remuneration for articles published in professional journal	8,000	" Interest on loan (profession)	20,000
" Sale of medicines	60,000	" Loan instalment paid (profession)	50,000
" Income from horse race	60,000	" Car expenses	20,000
" Interest on NSC	10,000	" Purchase of surgical equipments	50,000
		" Balance c/d	3,51,700
	6,25,000		**6,25,000**

Additional information :

a) 40% of car expenses are for personal use.

b) Income tax includes ₹ 3,000 professional tax paid.

c) Gifts from patients include ₹ 9,000 received on the occasion of marriage from friends.

Compute income from profession for the A.Y. 2025 – 26.

ಶ್ರೀ ಹರಿಯವರು ಉಡುಪಿಯಲ್ಲಿ ವೈದ್ಯರಾಗಿದ್ದು, ಈ ಕೆಳಗಿನ ಸ್ವೀಕೃತಿ ಮತ್ತು ಪಾವತಿಗಳನ್ನು ಆರ್ಥಿಕ ವರ್ಷ 31-3-2025ಕ್ಕೆ ನೀಡಿರುತ್ತಾರೆ.

ಸ್ವೀಕೃತಿಗಳು	₹	ಪಾವತಿಗಳು	₹
ಗೆ ಆರಂಭಿಕ ಶಿಲ್ಕು	65,000	ಯಿಂದ ಕ್ಲಿನಿಕ್‌ನ ಬಾಡಿಗೆ	35,000
" ಸಲಹಾ ಶುಲ್ಕ	1,50,000	" ವಿದ್ಯುತ್	3,300
" ಭೇಟಿಗಳ ಶುಲ್ಕ	70,000	" ಆದಾಯ ತೆರಿಗೆ	13,000
" ಬ್ಯಾಂಕಿನಿಂದ ಪಡೆದ ಸಾಲ (ವೃತ್ತಿಗಾಗಿ)	1,30,000	" ಕಂಪೌಂಡರ್‌ನ ಸಂಬಳ	50,000
" ಬ್ಯಾಂಕಿನಿಂದ ಪಡೆದ ಸಾಲ (ಸ್ವಂತಕ್ಕೆ)	50,000	" ಪುಸ್ತಕಗಳ ಖರೀದಿ	24,000
" ರೋಗಿಗಳಿಂದ ಬಂದ ಉಡುಗೊರೆ	22,000	" ಆದಾಯ ತೆರಿಗೆ ಪ್ರಕ್ರಿಯೆ ಮೇಲಿನ ವೆಚ್ಚಗಳು	5,000
" ವೃತ್ತಿಪರ ಜರ್ನಲ್‌ನಲ್ಲಿ ಪ್ರಕಟಿಸಿದ ಲೇಖನಗಳ ಸಂಭಾವನೆ	8,000	" ಪತ್ನಿಗೆ ಉಡುಗೊರೆ	3,000
" ಔಷಧಿಗಳ ಮಾರಾಟ	60,000	" ಸಾಲದ ಮೇಲಿನ ಬಡ್ಡಿ (ವೃತ್ತಿಗಾಗಿ)	20,000
" ಕುದುರೆ ಜೂಜಿನಿಂದ ಬಂದ ಆದಾಯ	60,000	" ಸಾಲದ ಮರುಪಾವತಿ ಕಂತು (ವೃತ್ತಿಗಾಗಿ)	50,000
" NSC ಮೇಲಿನ ಬಡ್ಡಿ	10,000	" ಕಾರಿನ ವೆಚ್ಚ	20,000
		" ಶಸ್ತ್ರ ಚಿಕಿತ್ಸಾ ಸಲಕರಣೆಗಳ ಖರೀದಿ	50,000
		" ಅಂತಿಮ ಶಿಲ್ಕು	3,51,700
	6,25,000		**6,25,000**

ಹೆಚ್ಚುವರಿ ವಿಷಯಗಳು :

a) ಕಾರಿನ ವೆಚ್ಚದ 40% ನ್ನು ವೈಯಕ್ತಿಕ ಉಪಯೋಗಕ್ಕೆ ಬಳಸಲಾಗಿದೆ.

b) ಆದಾಯ ತೆರಿಗೆಯಲ್ಲಿ ₹ 3,000 ಪಾವತಿಸಿದ ವೃತ್ತಿಪರ ತೆರಿಗೆ ಸೇರಿದೆ.

c) ರೋಗಿಗಳಿಂದ ಬಂದ ಉಡುಗೊರೆಗಳಲ್ಲಿ, ಮದುವೆಯ ಸಂದರ್ಭದಲ್ಲಿ ಸ್ನೇಹಿತರಿಂದ ಪಡೆದ ಉಡುಗೊರೆ ₹ 9,000 ಸೇರಿದೆ.

ತೆರಿಗೆಗೆ ಒಳಪಡುವ ವೃತ್ತಿಪರ ಆದಾಯವನ್ನು ತೆರಿಗೆ ವರ್ಷ 2025 – 26ಕ್ಕೆ ಕಂಡುಹಿಡಿಯಿರಿ.

9. Smt. Nandana (Resident) submits the following particulars of her Income for the year ending 31-3-2025.

a) Family pension from Govt. of Karnataka ₹ 52,000.

b) Royalty from books written ₹ 20,000 (expenses incurred ₹ 2,000).

c) Cash worth ₹ 1,00,000 was found in her private locker, the source of which could not be explained by her.

d) Interest on fixed deposit in a bank ₹ 16,000 (Gross).

e) Rent from subletting a house ₹ 1,500 P.M. (Rent paid to the owner of the house ₹ 1,000 P.M. she incurred ₹ 300 repairs on sublet part).

f) Winning from lottery (net) ₹ 35,000 (purchase of lottery tickets ₹ 100).

g) Income from agriculture from Bangladesh ₹ 20,000.

h) Interest on post office cumulative time deposit ₹ 9,000.

i) Remuneration from articles in magazines ₹ 3,000.

Compute her taxable income from other sources for the A.Y. 2025 – 26.

ಶ್ರೀಮತಿ ನಂದನಾರವರು (ನಿವಾಸಿ) ಕೆಳಗಿನ ಮಾಹಿತಿಗಳನ್ನು 31-3-2025ಕ್ಕೆ ನೀಡಿರುತ್ತಾರೆ.

a) ಕರ್ನಾಟಕ ಸರ್ಕಾರದಿಂದ ₹ 52,000 ಕುಟುಂಬ ಪಿಂಚಣಿಯನ್ನು ಪಡೆದಿರುತ್ತಾರೆ.

b) ಪುಸ್ತಕಗಳ ಬರಹದಿಂದ ಬಂದ ರಾಯಧನ ₹ 20,000 (ವೆಚ್ಚ ಮಾಡಿದ್ದು ₹ 2,000).

c) ಆಕೆಯ ಪ್ರೈವೇಟ್ ಲಾಕರ್ ₹ 1,00,000 ನಗದು ಪತ್ತೆಯಾಗಿದ್ದು, ಅದರ ವಿವರಣೆಯನ್ನು ನೀಡಲಾಗಿಲ್ಲ.

d) ಬ್ಯಾಂಕಿನಲ್ಲಿನ ಸ್ಥಿರ ಠೇವಣಿ ಮೇಲಿನ ಬಡ್ಡಿ ₹ 16,000 (ಸ್ಥೂಲ).

e) ಮನೆ ಉಪ-ಬಾಡಿಗೆಯಿಂದ ಪಡೆದದ್ದು ₹ 1,500 ಪ್ರತಿ ತಿಂಗಳಿಗೆ. ಮಾಲೀಕರಿಗೆ ಕೊಟ್ಟ ಬಾಡಿಗೆ ₹ 1,000 ಪ್ರತಿ ತಿಂಗಳಿಗೆ ರಿಪೇರಿ ವೆಚ್ಚಗಳು ₹ 300.

f) ಲಾಟರಿಯಿಂದ ಗಳಿಸಿದ್ದು (ನಿವ್ವಳ) ₹ 35,000 (ಲಾಟರಿ ಟಿಕೇಟು ಖರೀದಿ ₹ 100).

g) ಬಾಂಗ್ಲಾದೇಶದಿಂದ ಕೃಷಿ ಆದಾಯ ₹ 20,000.

h) ಅಂಚೆ ಕಛೇರಿ ಕ್ಯುಮುಲೇಟಿವ್ ಸಮಯ ಠೇವಣಿ ಮೇಲಿನ ಬಡ್ಡಿ ₹ 9,000.

i) ಲೇಖನಗಳ ಬರಹದಿಂದ ಬಂದ ಸಂಭಾವನೆ ₹ 3,000.

ಇವರ ಇತರ ಮೂಲಗಳಿಂದ ಬಂದ ಆದಾಯವನ್ನು ಕರ ವರ್ಷ 2025 – 26ಗೆ ಕಂಡುಹಿಡಿಯಿರಿ.

10. From the following information of Dhanush (Resident), compute total income and tax liability for the A. Y. 2025 – 26.

		₹
i)	Income from business (computed)	3,25,000
ii)	Income from salary (computed)	8,75,000
iii)	Income from Royalty	85,000
iv)	Director's fees received	22,000
v)	Life insurance premium paid	21,000
vi)	Contribution to PPF	12,000
vii)	Donation to Prime Minister's Relief Fund	15,000
viii)	Interest on education loan on his daughter	13,500

(Ignore alternative tax regime under Sec. 115 AC)

ಶ್ರೀ ಧನುಷ್ (ನಿವಾಸಿ) ಅವರ ಈ ಕೆಳಗಿನ ಮಾಹಿತಿಗಳಿಂದ ಕರ ವರ್ಷ 2025 – 26ಕ್ಕೆ ಒಟ್ಟು ಆದಾಯ ಮತ್ತು ತೆರಿಗೆ ಹೊಣೆಗಾರಿಕೆಯನ್ನು ಲೆಕ್ಕ ಹಾಕಿ.

		₹
i)	ವ್ಯವಹಾರದಿಂದ ಬಂದ ಆದಾಯ (ಲೆಕ್ಕಹಾಕಲಾಗಿದೆ)	3,25,000
ii)	ಸಂಬಳದ ಆದಾಯ (ಲೆಕ್ಕಹಾಕಲಾಗಿದೆ)	8,75,000
iii)	ರಾಯಧನದಿಂದ ಗಳಿಸಿದ ಆದಾಯ	85,000
iv)	ನಿರ್ದೇಶಕರ ಶುಲ್ಕ ಪಡೆದದ್ದು	22,000
v)	ಜೀವ ವಿಮೆಗೆ ಪಾವತಿಸಿದ ಪ್ರೀಮಿಯಂ	21,000
vi)	PPFಗೆ ಕೊಡುಗೆ	12,000
vii)	ಪ್ರಧಾನಮಂತ್ರಿ ಪರಿಹಾರ ನಿಧಿಗೆ ದೇಣಿಗೆ	15,000
viii)	ಮಗಳ ಶಿಕ್ಷಣ ಸಾಲದ ಮೇಲಿನ ಬಡ್ಡಿ	13,500

(ಸೆಕ್ಷನ್ 115 AC ಅಡಿಯಲ್ಲಿ ಪರ್ಯಾಯ ತೆರಿಗೆ ನಿಯಮವನ್ನು ನಿರ್ಲಕ್ಷಿಸಿ)

11. Mr. Janardhana (Resident) sold the following assets on 30-4-2024.

Particulars	Sale Considerations (₹)
1) Agricultural land in Mysuru (urban city) purchased in 2001 for ₹ 20,000 (FMV on 1-4-2001 ₹ 30,000) (CII : 100)	5,60,000
2) Machinery purchased on 1-5-2023 ₹ 25,000	30,000
3) Furniture purchased on 1-8-2023 for ₹ 2,500	3,800
4) Machinery purchase in 2013 – 14 for ₹ 50,000 (WDV on 1-4-2024 ₹ 35,000) (CII – 220)	60,000
5) Shop purchased in 2006 – 07 for ₹ 50,000 (CII : 122)	4,50,000
6) Residential house purchased in 2008 – 09 for ₹ 60,000 (CII : 137)	5,80,000

During the year he bought another house on 1-6-2024 for his residence for ₹ 2,00,000. The CII for 2024 – 25 is 363. Find out total amount of capital gain.

ಶ್ರೀ ಜನಾರ್ಧನ (ನಿವಾಸಿ) 30-4-2024 ರಂದು ಈ ಕೆಳಗಿನ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ.

ವಿವರಗಳು	ಹುಟ್ಟುವಳಿ (₹)
1) ಮೈಸೂರಿನಲ್ಲಿ (ನಗರ) 2001ರಲ್ಲಿ ₹ 20,000ಕ್ಕೆ ಖರೀದಿಸಿದ ಕೃಷಿ ಭೂಮಿ (1-4-2001 ರಂದು FMV ₹ 30,000) (CII : 100)	5,60,000
2) 1-5-2023ರಲ್ಲಿ ₹ 25,000ಕ್ಕೆ ಖರೀದಿಸಿದ ಯಂತ್ರೋಪಕರಣ	30,000
3) 1-8-2023ರಲ್ಲಿ ₹ 2,500ಕ್ಕೆ ಖರೀದಿಸಿದ ಪೀಠೋಪಕರಣ	3,800
4) 2013 – 14ರಲ್ಲಿ ₹ 50,000ಕ್ಕೆ ಖರೀದಿಸಿದ ಯಂತ್ರೋಪಕರಣ (1-4-2024 ರಂದು WDV ₹ 35,000) (CII – 220)	60,000
5) 2006 – 07ರಲ್ಲಿ ₹ 50,000ಕ್ಕೆ ಖರೀದಿಸಿದ ಅಂಗಡಿ (CII : 122)	4,50,000
6) 2008 – 09ರಲ್ಲಿ ಖರೀದಿಸಿದ್ದ ವಾಸದ ಮನೆ, ಖರೀದಿ ವೆಚ್ಚ ₹ 60,000 (CII : 137)	5,80,000

1-6-2024ರಲ್ಲಿ, ಅವರು ತಮ್ಮ ವಾಸಕ್ಕಾಗಿ ಮತ್ತೊಂದು ಮನೆಯನ್ನು ₹ 2,00,000 ಕ್ಕೆ ಖರೀದಿ ಮಾಡಿರುತ್ತಾರೆ. (CII : 2024 – 25 : 363).

ಇವರ ಒಟ್ಟು ಬಂಡವಾಳ ಲಾಭವನ್ನು ಕರ ವರ್ಷ 2025 – 26ಗೆ ಲೆಕ್ಕಹಾಕಿ.